# ಯುವಜನತೆಯ ಸ್ಫೂರ್ತಿ ಸ್ವಾಮಿ ವಿವೇಕಾನಂದರು

**ಅರುಣ್ ಸಿ.ಕೆ.**

ಸ್ವಾಮಿ ವಿವೇಕಾನಂದರು ಭಾರತದ ಯುವಜನತೆಗೆ ನಿರಂತರ ಸ್ಫೂರ್ತಿ ನೀಡುತ್ತ, ಭವ್ಯಭಾರತದ ನಿರ್ಮಾಣಕ್ಕೆ ಪ್ರೇರಕಶಕ್ತಿಯಾಗಿದ್ದಾರೆ. ಇಂದಿನ ಬದುಕಿನಲ್ಲಿ ಯುವಕ ಯುವತಿಯರು ಸ್ವಾಮೀಜಿಯವರ ಜೀವನ-ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಅಗತ್ಯವನ್ನು ಇಲ್ಲಿ ಪ್ರತಿಪಾದಿಸಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅವರು ತಮ್ಮ ವೃತ್ತಿಜೀವನದೊಂದಿಗೆ ಚಿಂತನಪರವಾದ ಲೇಖನಗಳನ್ನು ಪತ್ರಿಕೆಗಳಲ್ಲಿ ಬರೆಯುತ್ತ ಬಂದಿದ್ದಾರೆ.



**ಈ**ಗಿನ ಯುವಕರು ಮತ್ತು ವಿದ್ಯಾರ್ಥಿಗಳು ಜೀವನದಲ್ಲಿ ಏನನ್ನು ಸಾಧಿಸಬೇಕು ಎಂಬ ಘನವಾದ ಗುರಿ, ಸ್ಪಷ್ಟವಾದ ಕಲ್ಪನೆಯಿಲ್ಲದೆ ಆಧುನಿಕ ಜೀವನ ಶೈಲಿಯ ಜೊತೆಗೆ ಸ್ವಕೇಂದ್ರೀಕೃತ ಭೋಗ ಪ್ರಧಾನವಾದ ಬದುಕನ್ನು ನಡೆಸುತ್ತಾ, ಹಣ-ಅಂತಸ್ತು ಗಳಿಸುವುದೇ ವ್ಯಕ್ತಿತ್ವದ ಬೆಳವಣಿಗೆ ಹಾಗೂ ಪ್ರಗತಿ ಎಂದು ಭಾವಿಸುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಆಧುನಿಕ ನಾಗರಿಕತೆ ಎಂಬ ಸೋಗಿನಲ್ಲಿ ಯುವಮನಸ್ಸುಗಳನ್ನು ಮೊಬೈಲ್‌ಗಳು ಮತ್ತು ಸಮೂಹ ಮಾಧ್ಯಮವು ಆವರಿಸಿಕೊಂಡಿದ್ದು, ರಚನಾತ್ಮಕ ಚಿಂತನೆ, ಕ್ರಿಯಾಶೀಲತೆಯಿಂದ ಅವರು ವಂಚಿತರಾಗಿದ್ದು ವಿವೇಕಶೂನ್ಯರಾಗಿದ್ದಾರೆ. ಮನುಷ್ಯರ ನಡುವಿನ ಸಂಬಂಧಗಳು ಕ್ಷೀಣಿಸುತ್ತಿದ್ದು, ಬದಲಾಗಿ ವಸ್ತುಗಳ ಮೇಲಿನ ವ್ಯಾಮೋಹ ಹೆಚ್ಚಾಗಿದೆ. ಯಾಂತ್ರಿಕ ಹಾಗೂ ಒತ್ತಡದ ಬದುಕು ಮನುಷ್ಯನ ಆತ್ಮಸ್ಥೈರ್ಯವನ್ನು ಕುಗ್ಗಿಸುತ್ತಿದ್ದು ಕಷ್ಟಗಳು ಬಂದಾಗ ಧೈರ್ಯವಾಗಿ ಎದುರಿಸುವ ಮನೋದಾರ್ಢ್ಯವಿಲ್ಲದಂತಾಗಿದೆ. ಕೌಟುಂಬಿಕ ಹಾಗೂ ಸಾಮಾಜಿಕ ಜೀವನದಲ್ಲಿ ಶಾಂತಿ, ನೆಮ್ಮದಿ ಮರೀಚಿಕೆಯಾಗುತ್ತಿದ್ದು ಮತ್ತೊಬ್ಬರ ಕಷ್ಟಗಳಿಗೆ ಸ್ಪಂದಿಸುವ ಮನೋಧರ್ಮ, ಹೃದಯ ವೈಶಾಲ್ಯತೆ ಇಲ್ಲದಂತಾಗಿದೆ.

ಇಂಥಹ ಒಂದು ಸಂದರ್ಭದಲ್ಲಿ ವೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರ ಬದುಕು, ವಿಚಾರಧಾರೆ ಮತ್ತು ಸಂದೇಶಗಳು, ನಿಸ್ಸಂದೇಹವಾಗಿ ಯುವಕರು ಮತ್ತು ವಿದ್ಯಾರ್ಥಿಗಳಿಗೆ ಆದರ್ಶಪ್ರಾಯವಾದ ಪ್ರಜ್ಞಾವಂತಿಕೆಯ ಜೀವನವನ್ನು ನಡೆಸಲು ಸ್ಫೂರ್ತಿದಾಯಕವಾಗಿವೆ ಮತ್ತು ಪ್ರೇರಕ ಶಕ್ತಿಯಾಗಿವೆ.

'ಶುದ್ಧ ಚಾರಿತ್ರ್ಯ ಮತ್ತು ಸಂಸ್ಕೃತಿ ನಮ್ಮ ರಕ್ತದಲ್ಲಿ ಹರಿಯಬೇಕು. ಗೀತಾ ಅಧ್ಯಯನಕ್ಕಿಂತ ಫುಟ್‌ಬಾಲ್ ಆಟದಿಂದ ಮುಕ್ತಿಗೆ ಹತ್ತಿರ ಹೋಗುವಿರಿ.' ಯುವಕನು ಶರೀರವನ್ನು ಬಲಿಷ್ಠಗೊಳಿಸಿಕೊಂಡರೆ ಗೀತೆಯನ್ನು ಇನ್ನೂ ಚೆನ್ನಾಗಿ ಗ್ರಹಿಸಬಹುದು ಎಂಬುದು ಸ್ವಾಮೀಜಿಯವರ ಇಂಗಿತವಾಗಿತ್ತು. 'ಯಾವ ಬಗೆಯ ಶಿಕ್ಷಣದಿಂದ ನಮ್ಮ ಶೀಲ ರೂಪಗೊಳ್ಳುವುದೋ, ಮನಃಶಕ್ತಿ ವೃದ್ಧಿಯಾಗುವುದೋ, ಬುದ್ಧಿ ವಿಕಾಸಗೊಳ್ಳುವುದೋ, ಸ್ವಾವಲಂಬಿ ಬದುಕನ್ನು ರೂಪಿಸುತ್ತದೆಯೋ ಅಂತಹ ಶಿಕ್ಷಣವನ್ನು ನೀಡಬೇಕು' ಎಂಬುದು ಸ್ವಾಮೀಜಿಯವರ ಅಭಿಪ್ರಾಯವಾಗಿತ್ತು. ನೈತಿಕತೆ ಹಾಗೂ ಮಾನವೀಯ ಮೌಲ್ಯಗಳ ಭೂಮಿಕೆಯಲ್ಲಿ ಒಬ್ಬ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಂಡಾಗ ಸುಖೀ ಸಮಾಜ ನಿರ್ಮಾಣವಾಗುತ್ತದೆ.

ಪ್ರತಿಯೊಬ್ಬರಲ್ಲಿಯೂ ಅನಂತ ಶಕ್ತಿ ಹುದುಗಿದೆ. ಉನ್ನತವಾದ ಆದರ್ಶ, ನಿರ್ಭೀತಿ, ಕರ್ಮಕೌಶಲ್ಯ, ಆತ್ಮ ಸಂಯಮವನ್ನು ಬೆಳೆಸಿಕೊಂಡು, ನಾವು ಈಗಿರುವ ಸ್ಥಿತಿಗಿಂತ ಉತ್ತಮರಾಗಬೇಕೆನ್ನುವ ತುಡಿತವನ್ನು ಯುವಕರು ತಾರುಣ್ಯದಲ್ಲಿಯೇ ಬೆಳೆಸಿಕೊಳ್ಳಬೇಕು ಎಂಬುದು ಯುವಕರಿಗೆ ಸ್ವಾಮೀಜಿ ನೀಡಿದ ಹಿತೋಪದೇಶವಾಗಿದೆ.

## ರಾಷ್ಟ್ರೀಯ ಆದರ್ಶ : ತ್ಯಾಗ ಮತ್ತು ಸೇವೆ

ಸ್ವಾಮೀಜಿಯವರ ದೃಷ್ಟಿಯಲ್ಲಿ ತ್ಯಾಗ ಮತ್ತು ಸೇವೆ ನಮ್ಮ ಭರತಖಂಡದ ರಾಷ್ಟ್ರೀಯ ಆದರ್ಶವಾಗಬೇಕು. ಶಿವಭಾವದಲ್ಲಿ ಜೀವಸೇವೆ, ಸರ್ವ ಕರ್ಮಗಳ ಉದಾತ್ತೀಕರಣ, ಸೇವೆಯಿಂದ ವ್ಯಕ್ತಿಯ ಆಧ್ಯಾತ್ಮಿಕ ಉನ್ನತಿ, ಸೇವೆಯ ಹಿನ್ನೆಲೆಯಲ್ಲಿ ಸಮಷ್ಟಿ ಭಾವ, ವ್ಯಕ್ತಿಯ ಒಳಿತು ಸಮಾಜದ ಒಳಿತನ್ನು ಅವಲಂಬಿಸಿದೆ; ಸ್ವಾರ್ಥತ್ಯಾಗವೇ ಸೇವೆಯ ಜೀವಾಳ — ಇವು ಸ್ವಾಮೀಜಿಯವರು ಸ್ವ-ಅನುಭಾವದಿಂದ ಕಂಡುಕೊಂಡ ಸತ್ಯವಾಗಿತ್ತು.

ಮಾನವ ಕೋಟಿಗೆ ಸೇವೆಯನ್ನು ಮಾಡುವುದೇ ಮಹಾನ್ ಭಾಗ್ಯ. ಇದು ಪ್ರತಿಯೊಬ್ಬರ ಆದರ್ಶವಾಗಬೇಕು. ಇತರರಿಗೆ ಮಾಡುವ ತ್ಯಾಗ ಮತ್ತು ಸೇವೆಯೇ ನಿಜವಾದ ಧರ್ಮ ಎಂಬ ನಿಲುವನ್ನು ತಮ್ಮ ಬದುಕಿನುದ್ದಕ್ಕೂ ಅವರು ಪ್ರತಿಪಾದಿಸಿದರು. ನೊಂದವರಿಗೆ, ದೀನದಲಿತರಿಗೆ, ದುರ್ಬಲರಿಗೆ ಮಾಡುವ ಸೇವೆಯೇ ನಿಜವಾದ ಈಶ್ವರ ಸೇವೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ದೇವರಿದ್ದಾನೆ ಎಂದು ಮಾಡುವ ಸೇವೆಯೇ ದೇವರ ಪೂಜೆ. ನಮ್ಮ ಅಂತರ್ಯದಲ್ಲಿ ಅಡಗಿರುವ ದೈವತ್ವವನ್ನು ಪ್ರಕಾಶಪಡಿಸುವುದೇ ನಿಜವಾದ ಧರ್ಮ. ನಮ್ಮ ನೈಜ ಸ್ವರೂಪದಲ್ಲಿ ನಮಗಿರುವ ಅಜ್ಞಾನವೇ ನಮ್ಮ ಎಲ್ಲ ಸಮಸ್ಯೆಗಳಿಗೆ ಕಾರಣವಾಗಿದೆ ಎಂದು ಸ್ವಾಮೀಜಿ ಮನಗಂಡಿದ್ದರು. ಹಸಿದವರಿಗೆ ಅನ್ನವನ್ನು ನೀಡದೆ ಧರ್ಮವನ್ನು ಬೋಧಿಸಬೇಡ ಎಂದು ಹೇಳಿದ ಮಹಾನ್ ಮಾನವತಾವಾದಿ ಸ್ವಾಮಿ ವಿವೇಕಾನಂದರು.

ಅಂತರ್ಯದ ವಿಕಾಸದಿಂದಲೇ ನಮ್ಮ ಮನಸ್ಸು, ಬುದ್ಧಿ, ಭಾವನೆಗಳು ಉನ್ನತೀಕರಿಸಲ್ಪಡುವುದು. ಸ್ಫೂರ್ತಿ ಬರುವುದು ಹೃದಯದಿಂದ. ಪ್ರಪಂಚದ ರಹಸ್ಯಕ್ಕೆಲ್ಲ ಪ್ರೇಮವೇ ಹೆಬ್ಬಾಗಿಲು, ಪ್ರೀತಿಯು ಭಕ್ತಿಯನ್ನು ಕೊಡುವುದು, ಸಾಕ್ಷಾತ್ಕಾರವನ್ನು ಕೊಡುವುದು ಮತ್ತು ಮುಕ್ತಿಗೆ ದಾರಿ ತೋರುವುದು ಎಂಬುದು ಸ್ವಾಮೀಜಿಯವರ ಅನಿಸಿಕೆಯಾಗಿತ್ತು.

ಮನುಷ್ಯನ ಚಾರಿತ್ರ್ಯವನ್ನು ನಿರ್ಮಾಣ ಮಾಡುವುದರಲ್ಲಿ ಸುಖದುಃಖಗಳೆರಡೂ ಸಮಾನ ಪಾತ್ರವನ್ನು ವಹಿಸುತ್ತವೆ. ಕೆಲವು ಸಂದರ್ಭಗಳಲ್ಲಿ ಸುಖಕ್ಕಿಂತ ದುಃಖವೇ ಹೆಚ್ಚು ಪಾಠ ಕಲಿಸುತ್ತದೆ. ಪ್ರಶಂಸೆಗಿಂತ ಆಘಾತವೇ ನಮ್ಮನ್ನು ಆಂತರಿಕವಾಗಿ ಗಟ್ಟಿಗೊಳಿಸುತ್ತದೆ ಎಂಬುದು ಸ್ವಾಮೀಜಿಯವರ ಅನಿಸಿಕೆಯಾಗಿತ್ತು.

ತಮ್ಮ ಭಾರತದೇಶದ ಪ್ರವಾಸದ ವೇಳೆಯಲ್ಲಿ ಸ್ವಾಮೀಜಿ ಜನಸಮುದಾಯದ ದಾರಿದ್ರ್ಯವನ್ನು ಕಂಡು ವೇದನೆಯಿಂದ ಕಣ್ಣೀರು ಸುರಿಸಿದರು. ಹಳ್ಳಿಗಳ ಉದ್ಧಾರಕ್ಕಾಗಿ ಹೆಚ್ಚು ಸಾಧನಗಳನ್ನು ಕಂಡುಕೊಳ್ಳಲು ಅಮೆರಿಕ ಪ್ರವಾಸವನ್ನು ಕೈಗೊಂಡರು. ಬಡತನ ಮತ್ತು ದಾರಿದ್ರ್ಯವನ್ನು ಸುಧಾರಿಸದೆ ಭಾರತ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಹಸಿದವನನ್ನು ಆರ್ಥಿಕವಾಗಿ ಸದೃಢಗೊಳಿಸಿ ತನಗೆ ತಾನೇ ಸಹಾಯ ಮಾಡಿಕೊಳ್ಳುವಂತೆ ಶಕ್ತಿಯನ್ನು ತುಂಬಬೇಕು.

'ನನ್ನ ದೇಶದ ಒಂದು ನಾಯಿಯು ಸಹ ಅನ್ನವಿಲ್ಲದೆ ನರಳಬಾರದು' ಎಂಬ ದೃಢ ಸಂಕಲ್ಪವನ್ನು ಹೊಂದಿದ್ದ ಸ್ವಾಮೀಜಿಯರು ತಮ್ಮ ಸಂಪೂರ್ಣ ಜೀವನವನ್ನು ಭಾರತ ದೇಶದ ಅಭ್ಯುದಯಕ್ಕಾಗಿ, ಸುಧಾರಣೆಗಾಗಿ ಮೀಸಲಿಟ್ಟರು. ಲೋಕಕಲ್ಯಾಣಕ್ಕಾಗಿ ಹಲವಾರು ಸಂಸ್ಥೆಗಳನ್ನು ತೆರೆದರು. ಅನ್ನದಾನ, ವಿದ್ಯಾದಾನ ಮತ್ತು ಜ್ಞಾನದಾನಗಳ ಕಡೆಗೆ ಜನರ ಮನಸ್ಸನ್ನು ಸೆಳೆದರು. ಲೋಕ ಕಲ್ಯಾಣಕ್ಕಾಗಿ, ಗ್ರಾಮೀಣ ಜನರ ಉದ್ಧಾರಕ್ಕಾಗಿ ತೋರುತ್ತಿದ್ದ ಕಳಕಳಿ ಈಗಿನ ಯುವಜನಾಂಗಕ್ಕೆ ಆದರ್ಶಪ್ರಾಯವಾಗಿದೆ.

ಈಗಿನ ಯುವಕರು ಉತ್ತಮ ನಾಯಕರಾಗಬೇಕಾದರೆ, ಪ್ರತಿಯೊಬ್ಬ ವ್ಯಕ್ತಿಯನ್ನು, ಪ್ರತಿಯೊಂದು ರಾಷ್ಟ್ರವನ್ನು ಮಹತ್ತಿಗೇರಿಸಲು ಮೂರು ಅಂಶಗಳನ್ನು ಮೈಗೂಡಿಸಿಕೊಳ್ಳಬೇಕು.

ಒಳಿತಿನ ಶಕ್ತಿಯಲ್ಲಿ ಅಚಲ ವಿಶ್ವಾಸ, ಸಂಶಯ ಅಸೂಯೆಗಳ ಅಭಾವ ಹಾಗೂ ತಾವು ಒಳ್ಳೆಯವರಾಗಲು ಯತ್ನಿಸುವುದು. ಇತರರಿಗೆ ಒಳಿತನ್ನು ಬಯಸುವ ಸ್ವಭಾವವನ್ನು ಯುವಕರು ಮೊದಲು ಮೈಗೂಡಿಸಿಕೊಳ್ಳಬೇಕೆಂಬುದು ಸ್ವಾಮೀಜಿಯವರ ಆಶಯವಾಗಿತ್ತು.

## ಧೈರ್ಯವೇ ಜೀವನ ದುರ್ಬಲತೆಯೇ ಮರಣ

'ಭಯವೆಂದಿಗೂ ಇರಕೂಡದು. ವಜ್ರದಂತೆ ಕಠಿಣರು ಮತ್ತು ಸಿಂಹದಂತೆ ನಿರ್ಭೀತರು ಆಗಿರಬೇಕು. ನಮ್ಮ ದೇಶಕ್ಕೆ ಇಂದು ಬೇಕಾಗಿರುವುದು ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳು. ಅವುಗಳ ಅಂತರಾಳದಲ್ಲಿ ಸಿಡಿಲಿನಲ್ಲಿರುವಂತಹ ಸಾಮಗ್ರಿಗಳಿಂದ ಮಾಡಿದ ಮಾನಸಿಕ ಶಕ್ತಿ ಇರಬೇಕು. ನಾವು ನಿರ್ಭೀತರಾಗಬೇಕು. ಆಗ ನಮ್ಮ ಕೆಲಸ ಪರಿಪೂರ್ಣವಾಗುವುದು. ಅಂಜಿದೊಡನೆಯೇ ನೀವು ಕೆಲಸಕ್ಕೆ ಬಾರದವರಾಗುತ್ತೀರಿ. ಪ್ರಪಂಚದ ದುಃಖಕ್ಕೆಲ್ಲ ಕಾರಣ ಈ ಅಂಜಿಕೆಯೇ' ಎಂಬುದು ಸ್ವಾಮೀಜಿಯವರ ಅನುಭವದ ಮಾತಾಗಿತ್ತು. ಈ ಹಿನ್ನೆಲೆಯಲ್ಲಿ ವಾರಣಾಸಿಯಲ್ಲಿ ಸ್ವಾಮೀಜಿಯವರಿಗಾದ ಘಟನೆ ಇಲ್ಲಿ ಉಲ್ಲೇಖಾರ್ಹ.

''ವಾರಣಾಸಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಹಲವಾರು ಕೋತಿಗಳು ನನ್ನನ್ನು ಅಟ್ಟಿಸಿಕೊಂಡು ಬಂದವು. ಆಗ ನಾನು ಹೆಚ್ಚೆಚ್ಚು ಓಡಿದೆ. ಕೋತಿಗಳು ಇನ್ನೂ ಜೋರಾಗಿ ಅಟ್ಟಿಸಿಕೊಂಡು ಬರುತ್ತಿದ್ದವು. ಅಲ್ಲೇ ಇದ್ದ ಸಾಧು ಒಬ್ಬರು ನನ್ನನ್ನುದ್ದೇಶಿಸಿ 'ನಿಲ್ಲು! ಎದುರಿಸು, ಓಡಬೇಡ' ಎಂದು ಕೂಗಿ ಹೇಳಿದರು. ಆಗ ನಾನು ಹಿಂತಿರುಗಿದೆ ಮತ್ತು ಅವುಗಳನ್ನು ಎದುರಿಸಿದೆ. ಕೋತಿಗಳು ಭಯದಿಂದ ಹಿಂದಕ್ಕೆ ಹೋದವು. ಹಾಗೆಯೇ ಜೀವನದಲ್ಲಿ ಎಷ್ಟೇ ಕಷ್ಟಕಾರ್ಪಣ್ಯಗಳು ಬಂದೊದಗಿದರೂ ಪಲಾಯನವಾದಿಯಾಗದೆ ಧೈರ್ಯದಿಂದ ಎದುರಿಸುವ ಶಕ್ತಿಯನ್ನು ಬೆಳೆಸಿ

ಕೊಳ್ಳಿ, ಧೀರರಾಗಿ, ಬಲಾಢ್ಯರಾಗಿ. ಜವಾಬ್ದಾರಿಯನ್ನೆಲ್ಲ ನೀವೇ ವಹಿಸಿಕೊಳ್ಳಿ. ನಿಮ್ಮ ಅದೃಷ್ಟಕ್ಕೆ ನೀವೇ ಹೊಣೆ. ನಿಮ್ಮ ಏಳ್ಗೆಗೆ ನೀವೇ ಶಿಲ್ಪಿ ಎಂದು ಭಾವಿಸಿ'' ಎಂದು ಯುವಕರಿಗೆ ಜೀವನದ ಸ್ಫೂರ್ತಿಯ ಸಂದೇಶವನ್ನು ಸ್ವಾಮೀಜಿ ನೀಡಿದರು.

ಸ್ವಾಮಿ ವಿವೇಕಾನಂದರರದು ಆಯಸ್ಕಾಂತದಂತೆ ಆಕರ್ಷಿಸುವ ವ್ಯಕ್ತಿತ್ವ. ಭಾರತದೇಶ ಮತ್ತು ಪಾಶ್ಚಾತ್ಯ ದೇಶಗಳ ಹಲವಾರು ಸಾಧಕರಿಗೆ ಅವರ ಮಾತುಗಳು ಪ್ರೇರಣೆಯಾಗಿದ್ದವು. ಸ್ವಾಮೀಜಿಯವರ ಅನನ್ಯವಾದ ದೇಶಭಕ್ತಿ, ಶಕ್ತಿಯುತ ಉಪನ್ಯಾಸಗಳು, ಪ್ರಚೋದಕ ಬರಹಗಳು, ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಲಕ್ಷಾಂತರ ಮಂದಿ ಯುವಕರು ಭಾಗಿಯಾಗುವುದಕ್ಕೆ ಪ್ರೇರಣೆ, ಸ್ಫೂರ್ತಿ ನೀಡಿದವು. ಅಮೆರಿಕ ದೇಶದ ಚಿಕಾಗೋ ನಗರದಲ್ಲಿ ನಡೆದ ಚಾರಿತ್ರಿಕ ಐತಿಹಾಸಿಕ 'ವಿಶ್ವಧರ್ಮ ಸಮ್ಮೇಳನ'ವು ಸ್ವಾಮೀಜಿಯವರನ್ನು ವಿಶ್ವಮಾನವನನ್ನಾಗಿ ಮಾಡಿತು. ಪಾಶ್ಚಾತ್ಯರ ದೃಷ್ಟಿಯಲ್ಲಿ ನಗಣ್ಯವಾಗಿದ್ದ ಭರತಖಂಡಕ್ಕೆ ನವ ವೈಭವವನ್ನು ತಂದು ಕೊಟ್ಟಿತು. ಆಧ್ಯಾತ್ಮಿಕತೆಯ ಪುಣ್ಯಭೂಮಿಯಾದ ಹಾಗೂ ಶಕ್ತಿಕೇಂದ್ರವಾದ ಭರತಖಂಡದ ಋಷಿಮುನಿಗಳ ತಪಃಶಕ್ತಿಯ ಆಧ್ಯಾತ್ಮಿಕ ಭಾವನೆಗಳ ದಿವ್ಯಬೆಳಕು ಶ್ರೇಷ್ಠ ಪರಿವ್ರಾಜಕ ಸ್ವಾಮಿ ವಿವೇಕಾನಂದರ ಮೂಲಕ ವಿಶ್ವದೆಲ್ಲೆಡೆ ಪ್ರವಹಿಸಿತು. ಋಷಿಮುನಿಗಳು, ದಾರ್ಶನಿಕರು, ವೇದ, ಉಪನಿಷತ್ತು ಮತ್ತು ಹಿಂದೂಧರ್ಮದ ಸಾರವನ್ನು ಪಾಶ್ಚಾತ್ಯ ದೇಶಗಳಲ್ಲಿ ಉಪನ್ಯಾಸಗಳ ಮೂಲಕ ಅವರು ಅನಾವರಣಗೊಳಿಸಿದರು. ''ಭಾರತ ದೇಶವು ಪಾಶ್ಚಾತ್ಯ ದೇಶಗಳಿಗೆ ಅಧ್ಯಾತ್ಮವನ್ನು ನೀಡಬೇಕು. ಅವರಿಂದ ನಾವು ವಿಜ್ಞಾನಶಾಸ್ತ್ರ, ಸಂಘಟನ ಶಕ್ತಿ, ಅಧಿಕಾರವನ್ನು ಬಳಸುವ ರೀತಿ, ವ್ಯಕ್ತಿಗಳ ಸಾಮರ್ಥ್ಯವನ್ನು ವ್ಯವಸ್ಥೆಗೊಳಿಸುವ ಕೌಶಲ್ಯ ಮುಂತಾದವುಗಳನ್ನು ಕಲಿಯಬೇಕು'' ಎಂಬುದು ಸ್ವಾಮೀಜಿಯವರ ಆಶಯವಾಗಿತ್ತು. ಸ್ವಾಮೀಜಿಯವರ ಭಾವಪೂರ್ಣ ಉಪನ್ಯಾಸಗಳು ವಿಶ್ವದೆಲ್ಲೆಡೆ ಅಗಾಧವಾದ ಪರಿಣಾಮ ಮತ್ತು ಪ್ರಭಾವವನ್ನು ಬೀರಿತು.

ಜಾನ್ ಡಿ ರಾಕ್‌ಫೆಲ್ಲರ್ ಎಂಬ ಅಗರ್ಭ ಶ್ರೀಮಂತ ವ್ಯಾಪಾರಿಯು ಸ್ವಾಮಿ ವಿವೇಕಾನಂದರ ವ್ಯಕ್ತಿತ್ವಕ್ಕೆ ಮಾರುಹೋಗಿ, ತನ್ನ ಹೆಸರಿನಲ್ಲಿ ಒಂದು ಪ್ರತಿಷ್ಠಾನವನ್ನು ಸ್ಥಾಪಿಸಿ ಜನಗಳ ಸೇವೆಗಾಗಿ ತನ್ನ ಜೀವನವನ್ನು ಮುಡಿಪಾಗಿಟ್ಟನು.

ಭಾರತ ದೇಶದ ಯುವಶಕ್ತಿಯ ಬಗ್ಗೆ ಅಪಾರವಾದ ನಂಬುಗೆಯನ್ನು ಹೊಂದಿದ್ದ ಸ್ವಾಮಿಜಿಯವರು ಉತ್ಸಾಹೀ ತರುಣರು ಮತ್ತು ವಿದ್ಯಾರ್ಥಿಗಳು ಭವ್ಯ ಭಾರತದ ಶಿಲ್ಪಿಗಳು ಎಂದು ಹೇಳಿರುವುದು ಇಲ್ಲಿ ಉಲ್ಲೇಖಾರ್ಹ.

ಸ್ವಾಮಿ ವಿವೇಕಾನಂದರ ಆಯಸ್ಕಾಂತದಂತೆ ಆಕರ್ಷಿಸುವ ವ್ಯಕ್ತಿತ್ವ, ರಾಷ್ಟ್ರಪ್ರೇಮ ಮತ್ತು ವಿಶ್ವಕಾರುಣ್ಯ ಹಲವಾರು ಮಂದಿ ಸಾಧಕರಿಗೆ ಪ್ರೇರಣೆಯಾಗಿತ್ತು. ಕನ್ನಡ ಸಾಹಿತ್ಯ ಲೋಕದ ಮಿನುಗುತಾರೆ ರಾಷ್ಟ್ರಕವಿ ಕುವೆಂಪುರವರು 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯನ್ನು ಅಧ್ಯಯನ ಮಾಡಿ ಸ್ಫೂರ್ತಿಯನ್ನು ಪಡೆದು ಹೇಳಿರುವ ಮಾತುಗಳು ಅರ್ಥಪೂರ್ಣವೆನಿಸಿದೆ:

''ಸ್ವಾಮೀಜಿಯವರ ತಪಃಪೂರ್ಣವಾದ ಶಕ್ತಿವಾಣಿ ಒಂದು ಅಮೃತದ ಮಡು! ಇದರಲ್ಲಿ ಮಿಂದರೆ ಪುನೀತರಾಗುತ್ತೇವೆ. ಇದು ಜ್ಯೋತಿಯ ಖನಿ. ಹೊಕ್ಕರೆ ಪ್ರಬುದ್ಧರಾಗುತ್ತೇವೆ.''


ಮತ್ತೋರ್ವ ಕವಿ ರವೀಂದ್ರನಾಥ ಠಾಕೂರರು ಹೀಗೆಂದಿದ್ದಾರೆ:

''ನೀವು ಭಾರತವನ್ನು ಅರಿಯಬೇಕೆಂದಿದ್ದರೆ ಸ್ವಾಮಿ ವಿವೇಕಾನಂದರನ್ನು ಅಧ್ಯಯನ ಮಾಡಿ. ಅವರಲ್ಲಿ ಎಲ್ಲವೂ ರಚನಾತ್ಮಕವಾದುದು. ನೇತ್ಯಾತ್ಮಕವಾದದ್ದು ಯಾವುದೂ ಇಲ್ಲ''.

ಅಸಾಧಾರಣ ದೇಶಪ್ರೇಮಿಯಾಗಿದ್ದ ಸುಭಾಷ್ ಚಂದ್ರ ಬೋಸ್‌ರವರು ಭಾರತದ ಸ್ವಾತಂತ್ರ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಹೋರಾಟಗಾರರಾಗಿದ್ದರು. ಅವರ ಮಾತುಗಳಿವು:

''ಸ್ವಾಮೀಜಿಯವರ ನುಡಿಗಳಿಂದ ನಮ್ಮ ದೇಶದ ಜನ ಹಿಂದೆಂದೂ ಕಾಣದ ಆತ್ಮಗೌರವವನ್ನು, ಆತ್ಮವಿಶ್ವಾಸವನ್ನು ಹಾಗೂ ಆತ್ಮಬಲವನ್ನು ಪಡೆದಿದ್ದಾರೆ.''

**ಯುವಚೇತನ**



## ಬ್ರಹ್ಮಜ್ಞಾನದ ಫಲ

ಹಿಂದೂಧರ್ಮಕ್ಕೂ ಇತರ ಧರ್ಮಗಳಿಗೂ ಒಂದು ಭಾವನೆಯಲ್ಲಿ ವ್ಯತ್ಯಾಸವಿದೆ. ಯಾವ ಒಂದು ಭಾವನೆಯಲ್ಲಿ ವ್ಯತ್ಯಾಸವಿದೆ, ಯಾವ ಒಂದು ಭಾವನೆಯನ್ನು ವಿವರಿಸುವುದಕ್ಕೆ ಹಿಂದೂಗಳು ಸಂಸ್ಕೃತ ಭಾಷೆಯ ಭಂಡಾರವನ್ನೇ ಬರಿದು ಮಾಡುವರೋ ಅದೇ, ಮಾನವನು ಈ ಜನ್ಮದಲ್ಲೇ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬುದು. ಅದ್ವೈತ ಗ್ರಂಥಗಳು 'ದೇವರನ್ನು ಅರಿಯುವುದೆಂದರೆ ದೇವರಾದಂತೆ' ಎಂಬುದನ್ನು ಯುಕ್ತಿಯುಕ್ತವಾಗಿ ಸಾಧಿಸಿ ತೋರಿಸುತ್ತವೆ.

ಇದರ ಪರಿಣಾಮವಾಗಿ ಅತಿ ವಿಶಾಲವಾದ ಅದ್ಭುತವಾದ ಪ್ರತಿಭಾಪೂರ್ಣ ಭಾವನೆ ಹೊರಹೊಮ್ಮಿದೆ. ವೇದಕಾಲದ ಋಷಿಗಳು ಸಮರ್ಥಿಸಿದ್ದು ಮಾತ್ರವಲ್ಲ, ವಿದುರ ಮತ್ತು ಧರ್ಮವ್ಯಾಧರು ಬೋಧಿಸಿದ್ದು ಮಾತ್ರವಲ್ಲ, ಇತ್ತೀಚೆಗೆ ದಾದು ಪಂಥಕ್ಕೆ ಸೇರಿದ ನಿಶ್ಚಲದಾಸ ಕೂಡ ಧೈರ್ಯದಿಂದ 'ವಿಚಾರ ಸಾಗರ'ದಲ್ಲಿ ಹೀಗೆ ಹೇಳುವನು: ''ಯಾವನು ಬ್ರಹ್ಮನನ್ನು ಅರಿತಿರುವನೋ ಅವನು ಬ್ರಹ್ಮನಾಗಿರುವನು. ಅವನ ಮಾತುಗಳು ವೇದಗಳಿಗೆ ಸಮಾನ. ಅವು ಅಜ್ಞಾನದ ಅಂಧಕಾರವನ್ನು ಹೋಗಲಾಡಿಸುವುವು.''

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೫,ಪು. ೨೯೨)*